## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **412/2019**

ಚಾಸಾ-4 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 19-02-2026

| | | |
|---|---|---|
| ಹೆಸರು | : | ಗುಂಡಪ್ಪ |
| ತಂದೆಯ ಹೆಸರು | : | ರುಕ್ಕಣ್ಣ ಮಡಿವಾಳ |
| ವಯಸ್ಸು | : | 53 ವರ್ಷ |
| ಉದ್ಯೋಗ | : | HC-67 |
| ವಾಸಸ್ಥಳ | : | DGPS |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2016 ರಿಂದ 2017 ರವರೆಗೆ ಅಫಜಲಪುರ ಪೋಲಿಸ ಠಾಣೆಯಲ್ಲಿ ಪೋಲಿಸ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-04-2019 ರಂದು ನಾನು ಬೆಳಿಗ್ಗೆ 8 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರಿಗೆ ಭಾತ್ಮಿ ಬಂದಿದ್ದು, ಕುಡಿಗನೂರು ಗ್ರಾಮದಲ್ಲಿ ಮರಳು ಸಾಗಾಟ ಮಾಡುತ್ತಿರುವುದಾಗಿ ಖಚಿತ ಭಾತ್ಮಿ ಬಂದ ಮೇರೆಗೆ ನಾನು ಚಾಸಾ 1 ಮತ್ತು 6 ರವರು ಗುನ್ಹೆಸ್ಥಳಕ್ಕೆ ಹೋಗಿರುತ್ತೇವೆ. ನಮ್ಮನ್ನು ನೋಡಿ ಆರೋಪಿತನು ನದಿಯಲ್ಲಿ ಟ್ರಾಕ್ಟರ ಬಿಟ್ಟು ಓಡಿಹೋಗಿರುತ್ತಾನೆ. ಆ ನಂತರ ಪಂಚರಾದ ಲಕ್ಷ್ಮೀಪುತ್ರ ಚೆನ್ನಪ್ಪ ರವರಿಗೆ ಕರೆದುಕೊಂಡು ಹೋಗಿರುತ್ತೇವೆ. ಟ್ರಾಕ್ಟರ ಸ್ವರಾಜ ಕಂಪನಿ KA 28 TD 0371 ಇರುತ್ತದೆ. ಸದರಿ ಟ್ರಾಕ್ಟರನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ. ಟ್ರಾಕ್ಟರ ಮಾಲೀಕನ ಹೆಸರು ರಮೇಶ ಇರುತ್ತದೆ. 9-15 ರಿಂದ 10-15 ರವರೆಗೆ ಪಂಚನಾಮೆ ಮಾಡಿ ಚಾಸಾ 1 ರವರು ಮುಂದಿನ ತನಿಖೆಗಾಗಿ ಠಾಣಾಧಿಕಾರಿಗೆ ವರದಿ ನೀಡಿರುತ್ತಾರೆ.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಟ್ರಾಕ್ಟರನ ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗ ನಿಪಿ-**2** ರಿಂದ **5** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ MSD ವಕೀಲರಿಂದಃ-**

ಕುಡಿಗನೂರು ಗ್ರಾಮದ ಯಾವ ದಿಕ್ಕಿಗೆ ನದಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಗುನ್ಹೆಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ. ಆರೋಪಿ ಯಾವ ದಿಕ್ಕಿಗೆ ಓಡಿಹೋದರು ಎಂದರೆ ನಮ್ಮನ್ನು ನೋಡಿ ಓಡಿಹೋಗಿರುತ್ತಾರೆ, ಯಾವ ದಿಕ್ಕಿಗೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಆರೋಪಿತನು ಓಡಿಹೋದ ವ್ಯಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ ಹಸಿರು ಬಣ್ಣದು ಇರುತ್ತದೆ. ಪಂಚನಾಮೆಯನ್ನು ಗುನ್ಹೆಸ್ಥಳದಲ್ಲಿ ಮಾಡಿರುತ್ತೇವೆ. ಆರೋಪಿತನು ಕುಡಿಗನೂರು ಗ್ರಾಮದವನು ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಚೇರಿಯ ಅಂಕಿ ಸಂಖ್ಯೆಗೋಸ್ಕರ ಆರೋಪಿ ವಿರುದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ